ವಿಚಾರ ರಾಜಸ್ವದ ಶೇಕಡಾ 17ರ ದರದಲ್ಲಿ ಸರ್ಕಾರಕ್ಕೆ ಮೋಟ್ಟಾರು ವಾಹನ ತೆರಿಗೆಯನ್ನು ನೀಡುತ್ತಿದ್ದು, ಇದಕ್ಕೆ ವಿರುದ್ಧವಾಗಿ ಖಾಸಗಿ ವಾಹನ ಮಾಲೀಕರು ಶೇಕಡಾ 12ರಷ್ಟು ತೆರಿಗೆಯನ್ನು ನೀಡುತ್ತಿದ್ದಾರೆ.

ದಿನಾಂಕ 25-7-91ರಿಂದ ಗ್ರೀಸ್, ಕೀಲೆಣ್ಣೆ, ಇಂತಹ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಶೇಕಡಾ 2ರಷ್ಟು ಹೆಚ್ಚಿಸಲಾಯಿತು. ಮೇ 1990ರಿಂದ ಎಪ್ರಿಲ್ 1991ರ ಅವಧಿಯಲ್ಲಿ ಈಗಾಗಲೇ ಟೈರು ಟ್ಯೂಬ್ ಮತ್ತು ಫ್ಲಾಪ್ಸ್‌ಗಳ ಬೆಲೆಗಳು ಶೇಕಡಾ 12ರಷ್ಟು ಹೆಚ್ಚಿವೆ. ಇದಲ್ಲದೆ 1991ರ ಆಗಸ್ಟ್ ತಿಂಗಳ ಮಧ್ಯಭಾಗದಲ್ಲಿ ಇವುಗಳ ಬೆಲೆಯಲ್ಲಿ ಶೇಕಡಾ 11ರಷ್ಟು ಹೆಚ್ಚಳ ಉಂಟಾಗಿದೆ.

ಈ ಎಲ್ಲಾ ಕಾರಣಗಳನ್ನು ಗಣನೆಗೆ ತೆಗೆದುಕೊಂಡಲ್ಲಿ, ಬಸ್ ದರಗಳ ಹೆಚ್ಚಳ ಮಾಡುವುದನ್ನು ಬಿಟ್ಟು ಬೇರೆ ದಾರಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಇರುವುದಿಲ್ಲ.

ಆ) ಮೇಲೆ ತಿಳಿಸಿರುವ ವೈಜ್ಞಾನಿಕ ಆಧಾರಗಳಿಂದ ಈ ಹೆಚ್ಚಳ ಸರಿಯಾಗಿದೆ.

ಶಿಕ್ಷಣ ಮಾಧ್ಯಮದ ಬಗ್ಗೆ

418 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕ್ಷಣ ಮಾಧ್ಯಮದ ಬಗ್ಗೆ ಸರ್ಕಾರದ ಭಾಷಾ ನೀತಿ ಏನು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಶಿಕ್ಷಣ ಮಾಧ್ಯಮವು ಮಾತೃ ಭಾಷೆಯಲ್ಲಿಯೇ ಇರಬೇಕೆಂಬುದು ಸರ್ಕಾರದ ಭಾಷಾ ನೀತಿಯಾಗಿದೆ.

ಕರ್ನಾಟಕ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಹುದ್ದೆಗಳು

419 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕದ ವಿವಿಧ ನ್ಯಾಯಾಲಯಗಳಲ್ಲಿ ಎಷ್ಟು ನ್ಯಾಯಾಧೀಶರ ಹುದ್ದೆಗಳು ಖಾಲಿ ಇವೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) 1. ಜಿಲ್ಲಾ ನ್ಯಾಯಾಧೀಶರು 18+2 ರಜಾ ಮೀಸಲು

2. ಸಿವಿಲ್ ನ್ಯಾಯಾಧೀಶರು ಇಲ್ಲ

3. ಮುನ್ಸೀಫರು 26 + 14 ರಜಾ ಮೀಸಲು

ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿ

420 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಯ ಬಗೆಗೆ ಸರ್ಕಾರದ ನಿಲುವೇನು?

ಆ) ಹಾಗಿದ್ದಲ್ಲಿ ಇದರ ಅನುಷ್ಠಾನಕ್ಕಾಗಿ ಯಾವ ಕ್ರಮ ಕೈಗೊಂಡಿದೆ?

ಇ) ಹೊಸ ಶಿಕ್ಷಣ ನೀತಿಗಾಗಿ ಗುರುತುಪಡಿಸಲಾಗಿರುವ ಹಣ ಎಷ್ಟು? ಮತ್ತು ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ?